ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 3, July-August 2024, Pp. 61-68
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಸಾಂಸ್ಕೃತಿಕ ಅಧ್ಯಯನದ ಹೊಸ ಸಾಧ್ಯತೆಗಳು

**ತಿಪ್ಪೇಶ ಬಿ[1] ಮತ್ತು ಡಾ. ಭೀಮಾಶಂಕರ ಜೋಷಿ[2]**
[1]ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೀಡಿ, ಬೆಳಗಾವಿ.
[2]ಸಹಾಯಕ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ದಾವಣಗೆರೆ ವಿಶ್ವವಿದ್ಯಾಲನಿಲಯ, ದಾವಣಗೆರೆ.

***Abstract:***
*'ಸಾಂಸ್ಕೃತಿಕ ಅಧ್ಯಯನ' ಎಂಬ ಪರಿಕಲ್ಪನೆ ಇತ್ತೀಚೆಗೆ ಹೆಚ್ಚು ಚರ್ಚಿತ ಮತ್ತು ಜನಪ್ರಿಯ ಸಂಶೋಧನಾ ವಿಧಾನವಾಗಿದೆ. 'ಸಂಸ್ಕೃತಿ'ಯ ಬಗೆಗಿನ ಜಿಜ್ಞಾಸೆ ಮತ್ತು ಬಹುಶಿಸ್ತೀಯ ವ್ಯಾಖ್ಯಾನಗಳು ಇದಕ್ಕೆ ಕಾರಣವಾಗಿರಬಹುದು. ಸಾಮಾನ್ಯವಾಗಿ 'ಸಾಂಸ್ಕೃತಿಕ ಅಧ್ಯಯನ' ಕ್ಕೆ ತೊಡಗುವ ಮೊದಲು ಎಲ್ಲಾ ಸಂಶೋಧಕರು 'ಸಂಸ್ಕೃತಿ'ಯ ಬಗ್ಗೆ ವ್ಯಾಖ್ಯಾನ ಮಾಡುವ ಕ್ರಮವನ್ನಿಟ್ಟುಕೊಂಡಿದ್ದಾರೆ. ಸಂಸ್ಕೃತಿಯ ಬಗ್ಗೆ ವ್ಯಾಖ್ಯಾನ ಮಾಡುವ ಪ್ರಯತ್ನವಾದರೂ ದೊಡ್ಡ ತೊಡಕಿನದಾಗಿದ್ದು ಕಾಲಕಾಲಕ್ಕೆ ಅರ್ಥ ವಿಸ್ತಾರಗೊಂಡಿರುವುದನ್ನು ಕಾಣಬಹುದಾಗಿದೆ. ಈಗಲೂ 'ಸಂಸ್ಕೃತಿ'ಯ ಬಗ್ಗೆ ಇದೇ ಅಂತಿಮ ವ್ಯಾಖ್ಯಾನವೆಂದು ಸಾಬೀತು ಪಡಿಸಲು ಸಾಧ್ಯವಾಗಿಲ್ಲ. ಇತಿಹಾಸಕಾರರ ಆದಿಯಾಗಿ ಮಾನವಿಕ ವಿಜ್ಞಾನಗಳೆಲ್ಲವೂ ಸಂಸ್ಕೃತಿಗೆ ಸಂಬಂಧಿಸಿದಂತೆ ವ್ಯಾಖ್ಯಾನವನ್ನು ನೀಡಿವೆ. ಆದ್ದರಿಂದ 'ಸಾಂಸ್ಕೃತಿಕ ಅಧ್ಯಯನ' ತೊಡಗಿಕೊಳ್ಳುವವರ ಮೇಲೆ ಅವರ ಬಹುಶಿಸ್ತೀಯ ಹಿನ್ನೆಲೆ, ವೈಯಕ್ತಿಕತೆ ಮತ್ತು ಸೈದ್ಧಾಂತಿಕತೆ ಪ್ರಭಾವ ಬೀರುವ ಸಾಧ್ಯತೆ ಇರುತ್ತದೆ. ಅವನು, 'ಸಂಸ್ಕೃತಿ'ಯ ಬಗ್ಗೆ ಮಾಡಿಕೊಳ್ಳುವ ವಾಖ್ಯಾನದ ಮೇಲೆ 'ಸಾಂಸ್ಕೃತಿಕ ಅಧ್ಯಯನ'ಗಳು ನಿರ್ಧಾರವಾಗುತ್ತವೆ. ಆದ್ದರಿಂದ 'ಸಾಂಸ್ಕೃತಿಕ ಅಧ್ಯಯನ'ಗಳು ಹೆಚ್ಚು ನಿಖರವಾಗಿರುವುದಕ್ಕಿಂತ ಒಂದು ಊಹಾತ್ಮಕ ತಾರ್ಕಿಕ ವಿಶ್ಲೇಷಣೆಯನ್ನು ಅವಲಂಬಿಸಿರುತ್ತವೆ.*

**Keywords:** *ಸಂಸ್ಕೃತಿ, ಸಾಂಸ್ಕೃತಿಕ ಅಧ್ಯಯನ, ಪಾಶ್ಚಿಮಾತ್ಯ, ಮಾನವಶಾಸ್ತ್ರ, ಭೌತಿಕ ಸಂಸ್ಕೃತಿ, ಅಭೌತಿಕ ಸಂಸ್ಕೃತಿ.*

## ಪೀಠಿಕೆ

'ಸಾಂಸ್ಕೃತಿಕ ಅಧ್ಯಯನ'ಗಳ ಇತಿಹಾಸ ಅಧಿಕೃತವಾಗಿ ಪ್ರಾರಂಭವಾದದ್ದು ಆಂಗ್ಲರಿಂದಲೇ ಎಂಬುದು ನಿರ್ವಿವಾದವಾಗಿದೆ. ಕರ್ನಲ್ ಮೆಕೆಂಜಿಯವರ ಹಸ್ತಪ್ರತಿ ಸಂಗ್ರಹ, ಬಿ. ಎಲ್ ರೈಸ್ ಮತ್ತು ಫ್ಲೀಟ್ ರವರ ಶಾಸನ ಸಂಗ್ರಹದ ಕಾರ್ಯಗಳನ್ನು ಈಗಿನ ಅರ್ಥದಲ್ಲಿ 'ಸಾಂಸ್ಕೃತಿಕ ಅಧ್ಯಯನ'ಗಳೆಂದು ಹೇಳಲು ಬಾರದಿದ್ದರೂ 'ಸಾಂಸ್ಕೃತಿಕ ಅಧ್ಯಯನ'ಗಳಿಗೆ ನಾಂದಿ ಹಾಡಿದವೆಂದು ಹೇಳಬಹುದು. ಮೊದಲ ಪ್ರಯತ್ನಗಳು ಅಧ್ಯಯನಕ್ಕೆ ಬದಲಾಗಿ ಸಂಗ್ರಹ ಮತ್ತು ಸಮೀಕ್ಷೆಗಳ ರೂಪದಲ್ಲಿಯೇ ಇದ್ದವು. ಜಾಗತಿಕವಾಗಿ 18 ಮತ್ತು 19 ನೇ ಶತಮಾನದಲ್ಲಿ ಸಂಸ್ಕೃತಿಯ ಆಳವಾದ ಮತ್ತು ವಿಶ್ಲೇಷಣಾತ್ಮಕವಾದ ಅಧ್ಯಯನ ಪ್ರಾರಂಭವಾದದ್ದು ಮಾನವಶಾಸ್ತ್ರಜ್ಞರಿಂದ. ಇವರ

***Please cite this article as:*** ತಿಪ್ಪೇಶ ಬಿ ಮತ್ತು ಭೀಮಾಶಂಕರ ಜೋಷಿ. (2024). ಸಾಂಸ್ಕೃತಿಕ ಅಧ್ಯಯನದ ಹೊಸ ಸಾಧ್ಯತೆಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 3(3), 61–68

ಜೊತೆಗೆ ಸೇರಿಕೊಂಡವರು ಸಮಾಜಶಾಸ್ತ್ರಜ್ಞರು. ಇದಕ್ಕೂ ಮೊದಲು ಇತಿಹಾಸ ತಜ್ಞರು ಇತಿಹಾಸ ರಚನೆಯ ಭಾಗವಾಗಿ ಸಂಸ್ಕೃತಿ ಅಧ್ಯಯನದಲ್ಲಿ ತೊಡಗಿಕೊಂಡಿದ್ದರು. ಈ ಇತಿಹಾಸಕಾರರು ಆಧಾರಗಳಿಲ್ಲದೇ ಏನನ್ನು ಹೇಳದವರು. ಅದರಲ್ಲೂ ದಾಖಲು ಸಾಹಿತ್ಯವನ್ನು ಮಾತ್ರ ಸಂಸ್ಕೃತಿ ವಿಶ್ಲೇಷಣೆಗೆ ಬಳಸಿಕೊಂಡರು. ಅಲ್ಲದೇ ಕೆಲವೊಮ್ಮೆ ಅಂದಾಭಿಮಾನ, ರಾಷ್ಟ್ರೀಯತೆ ಮತ್ತು ಪ್ರಾಂತೀಯತೆಯಂತಹ ಅಂಶಗಳು ಇತಿಹಾಸಕಾರರಿಗೆ ಮಿತಿಯಾಗುವುದುಂಟು. ಗತಕಾಲದ ಒಂದು ಪಾರ್ಶ್ವಿಕ ನೋಟ ಮಾತ್ರ ಇತಿಹಾಸದಲ್ಲಿ ದೊರಕುತ್ತದೆ. ಪ್ರಾಚೀನ ಮಾನವನ ಸಂಪೂರ್ಣ ಜೀವನಕ್ರಮ ಇತಿಹಾಸದಲ್ಲಿ ದಾಖಲಾಗಿರುವುದಕ್ಕೆ ಸಾಧ್ಯವೇ ಇಲ್ಲ. ಆದ್ದರಿಂದ ಐತಿಹಾಸಿಕ ದಾಖಲೆಗಳನ್ನು ಆಧರಿಸಿದ 'ಸಾಂಸ್ಕೃತಿಕ ಅಧ್ಯಯನ'ಗಳು ಕೆಲವು ಮಿತಿಗಳಿಂದ ಕೂಡಿರಬಹುದು ಎನ್ನುವ ಅಭಿಪ್ರಾಯ ವ್ಯಕ್ತವಾಗಿದೆ.

ಇನ್ನೊಂದು ಸಮಸ್ಯೆ ಏನೆಂದರೆ 'ಸಂಸ್ಕೃತಿ'ಯ ಅಧ್ಯಯನದ ವಿಚಾರವು ರಾಜಕೀಯ ಹಿತಾಸಕ್ತಿಗಳಿಗೆ ಬಲಿಯಾಗಿರುವುದೂ ಉಂಟು. ಸ್ವಾತಂತ್ರ್ಯ ಪೂರ್ವದಲ್ಲಿ 'ಸಾಂಸ್ಕೃತಿಕ ಅಧ್ಯಯನ' ಮೂಲಕ ವಸಾಹತುಶಾಹಿ ರಾಷ್ಟ್ರಗಳು ಪ್ರತಿಪಾದಿಸಲುದ್ದೇಶಿಸಿದ ವಿಷಯವೇನೆಂಬುದು ಸ್ಪಷ್ಟ. 'ಸಂಸ್ಕೃತಿ' ಎಂಬುದಕ್ಕೆ ಅವರು ಕೊಟ್ಟುಕೊಂಡ ವ್ಯಾಖ್ಯಾನ ಕೂಡ ಅವರ 'ಸಾಂಸ್ಕೃತಿಕ ಅಧ್ಯಯನಗ'ಳ ಮೇಲೆ ಪ್ರಭಾವ ಬೀರಿದೆ. ವಸಾಹತುಶಾಹಿ ಹಿತಾಸಕ್ತಿಯ ಭಾಗವಾಗಿಯೇ ಅವರ ಅಧ್ಯಯನಗಳು ನಡೆದಿವೆ ಎಂಬುದರಲ್ಲಿ ಯಾವ ದ್ವಂದ್ವವಿಲ್ಲ. ಖ್ಯಾತ ವಿಮರ್ಶಕ ಕೀರ್ತಿನಾಥ ಕುರ್ತಕೋಟಿಯವರು ತಮ್ಮ 'ಭಾಷಾಂತರ' ಎಂಬ ಲೇಖನದಲ್ಲಿ ಈ ಬಗ್ಗೆ ದೀರ್ಘವಾಗಿ ವಿವೇಚಿಸಿದ್ದಾರೆ. 'ಭಾಷಾಂತರ'ವನ್ನು ಅವರು ನೋಡುವ ದೃಷ್ಟಿಕೋನವೇ ಭಿನ್ನವಾದುದು ಮತ್ತು ವ್ಯಾಪಕವಾದುದು. ಒಟ್ಟಾರೆ ಪೌರ್ವಾತ್ಯರ ಜೀವನಕ್ರಮವನ್ನೇ ಭಾಷಾಂತರಿಸಬೇಕೆಂದು ಪಾಶ್ಚಾತ್ಯರು ಬಯಸಿದರು. ಅವರ ಪ್ರತಿ ಅಧ್ಯಯನದ ಹಿಂದೆ ಈ ಉದ್ದೇಶ ಕೆಲಸ ಮಾಡಿದೆ. ಲೇಖನದ ಒಟ್ಟು ಸಾರಾಂಶದ ಪ್ರಕಾರ ಪಾಶ್ಚಾತ್ಯರ ಅಧ್ಯಯನದ ಉದ್ದೇಶ ಕೇವಲ ವ್ಯಾಪಾರಕ್ಕೆ ಪೂರಕ ವಾತಾವರಣ ಸೃಷ್ಟಿಸುವುದು ಮಾತ್ರವೇ ಆಗಿರದೇ ಎಲ್ಲಾ ರಂಗಗಳಿಗೆ ಅದನ್ನು ವಿಸ್ತರಿಸಿದರು.

'ಸಾಂಸ್ಕೃತಿಕ ಅಧ್ಯಯನ'ದಲ್ಲಿ ಪಾಶ್ಚಾತ್ಯರಿಗೆ ಎರಡು ಬಗೆಯ ದೃಷ್ಟಿಕೋನಗಳಿರುವುದು ಸ್ಪಷ್ಟ. ಒಂದು. ಪೌರ್ವಾತ್ಯರು ವಿಶೇಷವಾಗಿ ಭಾರತೀಯರಿಗೆ ತಮ್ಮದೇ ಆದ ಘನತೆಯುಳ್ಳ ಸಂಸ್ಕೃತಿಯೆಂಬುದು ಇಲ್ಲ. ನಾವು ಅವರನ್ನು ಸುಸಂಸ್ಕೃತರನ್ನಾಗಿ, ನಾಗರಿಕರನ್ನಾಗಿ ಮಾಡುವುದರ ಮೂಲಕ ಭಾರತೀಯರನ್ನು ಉದ್ಧಾರ ಮಾಡಬೇಕು ಎಂಬುದು. ಈ ದೃಷ್ಟಿಕೋನದವರು ಭಾರತೀಯರ ನಡೆ–ನುಡಿ, ಉಡುಪು, ಕಂದಾಚಾರಗಳನ್ನು ನೋಡಿ ಅನಾಗರಿಕರೆಂದು ಬಗೆದವರು. ಅಧ್ಯಯನಗಳ ಮೂಲಕ ಭಾರತೀಯರ ಈ ಸ್ಥಿತಿಗೆ ಕಾರಣವಾದ ಅಂಶಗಳನ್ನು ಶೋಧಿಸುವುದು ಮತ್ತು ಪರಿಹಾರವನ್ನು ಕೊಡುವುದು ಆಗಿತ್ತು. ಇನ್ನೊಂದು, ಭಾರತೀಯರ ಘನವಾದ ಸಂಸ್ಕೃತಿಯನ್ನು ಸೆಲೆಕ್ಟೀವ್ ಆಗಿ ಒಪ್ಪಿಕೊಂಡು ತಮ್ಮ ವಸಾಹತುಶಾಹಿ ಹಿತಾಸಕ್ತಿಗೆ ಪೂರಕವಾಗಿ ಬಳಸಿಕೊಳ್ಳುವುದಕ್ಕೆ ನೋಡಿದವರು. ಇವರು ತಮಗೆ ಪೂರಕವೆನಿಸಿದ ಕೆಲವು ಸಾಂಸ್ಕೃತಿಕ ಮೌಲ್ಯಗಳನ್ನು ವೈಭವೀಕರಿಸಿ ಭಾರತೀಯರ ಮನ ಗೆದ್ದು ತಮ್ಮ ಉದ್ದೇಶ ಸಾಧಿಸಿದವರು. ಹತ್ತನೆಯ ಶತಮಾನದಲ್ಲಿದ್ದ ಕ್ಷಾತ್ರ ಪರಂಪರೆ, ಸ್ವಾಮಿನಿಷ್ಠೆ, ಬಲಿದಾನಗಳನ್ನು ವೈಭವೀಕರಿಸಿ ಸಾಮ್ರಾಜ್ಯವಾದದ ತಮ್ಮ ಹಿತಾಸಕ್ತಿಗೆ ಪೂರಕವಾದ ಭಾರತೀಯ ಸಾಂಸ್ಕೃತಿಕ ರಂಗವನ್ನು ಸಜ್ಜುಗೊಳಿಸುವುದು ಇವರ ಉದ್ದೇಶವಿದ್ದಂತೆ ಕಾಣುತ್ತದೆ. ನಿದರ್ಶನಕ್ಕಾಗಿ ನೋಡುವುದಾದರೆ 12ನೇ ಶತಮಾನದಲ್ಲಿ ರಾಜಪ್ರಭುತ್ವವನ್ನು ವಿರೋಧಿಸಿದ ಜನಪರವಾದ ಶರಣ ಚಳುವಳಿಗಿಂತ 10ನೇ ಶತಮಾನದ ವೀರಪರಂಪರೆ, ಸ್ವಾಮಿನಿಷ್ಠೆ, ಬಲಿದಾನ, ಯುದ್ಧ

ಪ್ರೇರಣೆ. ರಾಜ ವೈಭವದ ಕಾಲವನ್ನು ಸಹಜವಾಗಿಯೇ ಒಪ್ಪಿಕೊಂಡರು. ಅಂದರೆ ಭಾರತೀಯ ನೆಲದಲ್ಲಿ ಯಾವತ್ತೂ ಏಕ ಪ್ರಕಾರದ ಸಾಂಸ್ಕೃತಿಕ ಪ್ರಸರಣವಿರಲಿಲ್ಲ. ಭಾರತೀಯ ಸಂಸ್ಕೃತಿಯಲ್ಲಿ ಗುಪ್ತಗಾಮಿನಿಯಾಗಿರುವ ಸೂಕ್ಷ್ಮವಾದ ಪ್ರತಿರೋಧಗಳನ್ನು ಅರಿಯದೇ ಹೋದರು. ಸಂಘರ್ಷ ಅಥವಾ ಬಹುತ್ವದ ಮಾದರಿಯನ್ನು ಗುರುತಿಸದೇ ಹೋದರು. ಸ್ವಾತಂತ್ರ್ಯೋತ್ತರ ಕಾಲದಲ್ಲಿಯ ಆರಂಭದಲ್ಲಿ ಇದೇ ಅಧ್ಯಯನ ಮಾದರಿ ಮುಂದುವರೆದಿರುವುದನ್ನು ಕಾಣಬಹುದಾಗಿದೆ. ಆಧುನಿಕೋತ್ತರ ಕಾಲಘಟ್ಟದಲ್ಲಿ 'ಸಂಸ್ಕೃತಿ'ಯ ಅಧ್ಯಯನ ಕುರಿತು ಹೊಸ ಒಳನೋಟಗಳು ದೊರೆತವು. ಮೌಖಿಕ ಪರಂಪರೆಯ ಸಾಮಗ್ರಿಗಳು ಅಧ್ಯಯನ ವ್ಯಾಪ್ತಿಯೊಳಗೆ ಬಂದವು.

ಮಾನವಶಾಸ್ತ್ರ ಮತ್ತು ಸಮಾಜಶಾಸ್ತ್ರಗಳ ಬೆಳವಣಿಗೆಯಾದ ಮೇಲೆ 'ಸಾಂಸ್ಕೃತಿಕ ಅಧ್ಯಯನ' ಗಳ ಅಧ್ಯಯನಕ್ಕೆ ಹೊಸ ವ್ಯಾಪ್ತಿ ಮತ್ತು ದೃಷ್ಟಿಕೋನ ದೊರೆಯಿತು. ಮಾನವಶಾಸ್ತ್ರಜ್ಞರು ಮತ್ತು ಸಮಾಜಶಾಸ್ತ್ರಜ್ಞರು ಸಂಸ್ಕೃತಿಯನ್ನು ಪರಿಭಾವಿಸುವ ಮೂಲ ಗ್ರಹಿಕೆಯೇ ಬೇರೆ ತೆರನಾಗಿರುತ್ತದೆ. ಮಾನವಶಾಸ್ತ್ರಜ್ಞರಿಗೆ ಮಾನವನೇ ಪ್ರಮುಖ ಮತ್ತು ಪ್ರಥಮ. ರಾಷ್ಟ್ರ ಪ್ರಾಂತ್ಯ ಧರ್ಮಗಳಂತಹ ವಿಚಾರಗಳನ್ನು ದ್ವಿತೀಯವಾಗಿಯೇ ಕಂಡರು. ಪ್ರಪಂಚದಲ್ಲಿ ಮಾನವರು ದೇಶ, ಜನಾಂಗ, ಧರ್ಮ, ವರ್ಣ, ವರ್ಗಗಳ ದೃಷ್ಟಿಯಿಂದ ಭಿನ್ನವಾಗಿ ಕಂಡರೂ ಅವರ ಸಹಜ ಪ್ರವೃತ್ತಿಗಳು ಒಂದೇ ಆಗಿರುತ್ತವೆ. ಒಳ್ಳೆಯದು–ಕೆಟ್ಟದ್ದು, ನಾಗರಿಕ–ಅನಾಗರಿಕ, ಸ್ವಾರ್ಥ–ನಿಸ್ವಾರ್ಥ, ತ್ಯಾಗ–ಭೋಗ, ಸುಖ–ದುಃಖ ಹೀಗೆ ದ್ವಂದ್ವವೆನಿಸುವ ಸಂಗತಿಗಳು ಪ್ರಪಂಚದ ಎಲ್ಲಾ ಮನುಷ್ಯರಿಗೂ ಸಮಾನವಾಗಿವೆ ಎಂದು ಈ ಅಧ್ಯಯನಕಾರರು ಸಾರಿದರು. ಆದ್ದರಿಂದ ಸಾಂಸ್ಕೃತಿಕವಾಗಿ ಮುಂದುವರೆದಿರುವ ಮತ್ತು ಸಾಂಸ್ಕೃತಿಕವಾಗಿ ಹಿಂದುಳಿದವರು ಎಂಬ ವಿಭೇದವನ್ನು ಈ ಅಧ್ಯಯನಕಾರರು ತಿರಸ್ಕರಿಸಿದರು. ಇದು ಸಂಸ್ಕೃತಿ ಅಧ್ಯಯನದಲ್ಲಿ ಕ್ರಾಂತಿಕಾರಕ ದೃಷ್ಟಿಕೋನಗಳಿಗೆ ಕಾರಣವಾಯಿತು.

ಸ್ವಾತಂತ್ರೋತ್ತರ ಕಾಲಘಟ್ಟದಲ್ಲಿ ವಸಾಹತುಶಾಹಿಗಳು ಹಾಕಿಕೊಟ್ಟ 'ಸಾಂಸ್ಕೃತಿಕ ಅಧ್ಯಯನ'ಗಳ ಮಾದರಿಗಳು ಮುಂದುವರೆದವು. ಇಲ್ಲಿ ಬದಲಾದ ಪರಿಸ್ಥಿತಿಯಲ್ಲಿ ಯುರೋಪಿನ ಅಥವಾ ಪಾಶ್ಚಾತ್ಯರ ಸಂಸ್ಕೃತಿಗೆ ಪ್ರತಿಯಾಗಿ ಭಾರತೀಯರಿಗೆ ತಮ್ಮ ಸಂಸ್ಕೃತಿಯ ಬಗ್ಗೆ ಅಭಿಮಾನ ಮತ್ತು ಶ್ರೇಷ್ಠತೆಯ ಬಗ್ಗೆ ಇರುವ ಹೆಮ್ಮೆಗಳು 'ಸಾಂಸ್ಕೃತಿಕ ಅಧ್ಯಯನ'ಗಳ ಮೇಲೆ ಪ್ರಭಾವ ಬೀರಿವೆ. ಸಂಸ್ಕೃತಿಗಳು ಭಿನ್ನವಾದರೂ ಅಧ್ಯಯನ ಮಾದರಿಗಳು ಒಂದೇ ಆಗಿರುವುದನ್ನು ಗಮನಿಸಬಹುದು. ಪ್ರಭುತ್ವದ ವೈಭವೀಕರಣ. ತ್ಯಾಗ ಬಲಿದಾನಗಳು, ಕಲೆ, ಸಂಗೀತ, ಸಾಹಿತ್ಯಗಳು ಶಾಸನಗಳಲ್ಲಿ ವ್ಯಕ್ತವಾದ ಜೀವನ ಕ್ರಮಗಳು ಬಹುತೇಕ ಅಧ್ಯಯನಗಳ ಮುಖ್ಯವಸ್ತುವಾಗಿವೆ. ಭಾರತದ ಸಾಂಸ್ಕೃತಿಕ ಚಿಂತಕರಲ್ಲಿ ಪ್ರಮುಖರಾದ ಆನಂದ ಕುಮಾರಸ್ವಾಮಿ ಯವರ ಪ್ರಭಾವವನ್ನು ಗುರುತಿಸಬಹುದು. ಇವರ ಪ್ರಭಾವ ಕನ್ನಡದ ಡಿ.ವಿ.ಜಿ, ಮಾಸ್ತಿ ಮತ್ತು ದೇವುಡು ರವರ ಬರೆಹಗಳಲ್ಲಿ ಕಾಣಬಹುದು. ರಾಷ್ಟ್ರೀಯತೆಯ ಉದಯ, ದೇಶಪ್ರೇಮ, ಸ್ವಾತಂತ್ರ್ಯ ಹೋರಾಟದ ಸ್ಫೂರ್ತಿಗಳು ಉದಯವಾದ ಕಾಲಘಟ್ಟದಲ್ಲಿ ಈ ರೀತಿಯ ಅಧ್ಯಯನಗಳ ಅವಶ್ಯಕತೆಯೂ ಭಾರತಕ್ಕಿತ್ತು.

ವಸಾಹತೋತ್ತರ ಕಾಲಘಟ್ಟದಲ್ಲಿ ಪ್ರಮುಖ ಪಾತ್ರವಹಿಸುವ ವಾಸ್ತವವಾದ, ಅಸ್ತಿತ್ವವಾದ, ಆಧುನಿಕತೆ, ನವ್ಯವಾದ, ಸಂರಚನಾವಾದ, ನಿರಚನವಾದ, ಮಾರ್ಕ್ಸ್‌ವಾದಗಳು ಪ್ರಚಲಿತಕ್ಕೆ ಬಂದಮೇಲೆ 'ಸಾಂಸ್ಕೃತಿಕ ಅಧ್ಯಯನ'ಗಳ ಮಾದರಿಗಳು ಬೇರೆಯದೇ ಸ್ವರೂಪ ಪಡೆದವು. ಆರಂಭದಲ್ಲಿದ್ದ ಆದರ್ಶವಾದ ಅಥವಾ ನೈತಿಕ ಉನ್ನತವಾದದಲ್ಲಿದ್ದ ಸಾಂಸ್ಕೃತಿಕ ಅಧ್ಯಯನಗಳ ಮಿತಿಗಳು ಸ್ಪಷ್ಟವಾಗಿ ಗೋಚರವಾಗತೊಡಗಿದವು. ಈ

ವೇಳೆಗಾಗಲೇ 'ಗ್ರಾಂಶಿಯೋ'ನ 'ಸಾಂಸ್ಕೃತಿಕ ಯಾಜಮಾನ್ಯ' ಪರಿಕಲ್ಪನೆಯು ಬೇರೆಯದೇ ಆದ ಸತ್ಯವನ್ನು ಪ್ರತಿಪಾದಿಸಿತು. ಭಾಷಾ ವಿಜ್ಞಾನದಲ್ಲಿ ನಡೆದ ಹೊಸ ಅವಿಷ್ಕಾರಗಳು ಸಾಂಸ್ಕೃತಿಕ ಅಧ್ಯಯನಗಳ ಬಗ್ಗೆ ಬೇರೆಯದೇ ಒಳನೋಟಗಳನ್ನು ನೀಡಿದವು. ಈಗಾಗಲೇ ಹೇಳಿದಂತೆ ಮಾನವಶಾಸ್ತ್ರ ಮತ್ತು ಸಮಾಜಶಾಸ್ತ್ರದಂತಹ ಶಾಖೆಗಳು 'ಸಾಂಸ್ಕೃತಿಕ ಅಧ್ಯಯನಗಳ' ಹೊಣೆ ತಮ್ಮದೆಂದು ಭಾವಿಸಿದವು.

**'ಸಾಂಸ್ಕೃತಿಕ ಅಧ್ಯಯನಗಳ' ಕಾಲ ಮುಗಿದು ಹೋಗಿದಿಯಾ?**

ಇಂತಹದ್ದೊಂದು ಅಭಿಪ್ರಾಯ ಅಕಾಡೆಮಿಕ್ ವಲಯದಲ್ಲಿ ಮೂಡಿದೆ. ಇದಕ್ಕೆ ಕಾರಣಗಳು ಹಲವು. ಸಾಂಸ್ಕೃತಿಕ ಅಧ್ಯಯನಗಳ ಮೇಲೆ ಹೊರಿಸಲಾದ ಆರೋಪಗಳಿವು.

- ಸಾಂಸ್ಕೃತಿಕ ಅಧ್ಯಯನಗಳು ಒಂದು ಸಿದ್ಧ ಮಾದರಿಯಲ್ಲಿ ನಡೆಯುತ್ತಾ ಸಾಗಿವೆ. ಇವುಗಳಲ್ಲಿ ವೈವಿಧ್ಯತೆಯಾಗಲಿ ನವೀನ ಸಂಶೋಧನಾ ವಿನ್ಯಾಸವಾಗಲಿ ಕಾಣಲಾಗುತ್ತಿಲ್ಲ.

- ಆರಂಭದಲ್ಲಿ ಅದ್ಭುತವೆನಿಸುವ ವಿಶ್ಲೇಷಣೆ ಮತ್ತು ಅಧ್ಯಯನಗಳು ನಡೆದವು. ಅವು ಪ್ರಸಿದ್ಧವೂ ಜನಪ್ರಿಯವೂ ಆದವು. ನಂತರ ಬಂದ ಅಧ್ಯಯನಗಳು ಅವುಗಳ ಚರ್ವಿತ ಚರ್ವಣ ಮಾದರಿಯನ್ನು ಅನುಸರಿಸಿದವು.

- ಇತಿಹಾಸಕಾರ ಮಾಡುವ ಕೆಲಸವನ್ನು ಸಾಂಸ್ಕೃತಿಕ ಅಧ್ಯಯನಕಾರ ವಹಿಸಿಕೊಂಡನು. ದಾಖಲಾದ ಸಾಹಿತ್ಯದ ಅಥವಾ ಸಾಮಗ್ರಿಗಳ ಆಧಾರದ ಮೇಲೆ ವರದಿ ಬರೆಯುವ ಮಟ್ಟಕ್ಕೆ ಸಾಂಸ್ಕೃತಿಕ ಅಧ್ಯಯನಗಳು ಸೀಮಿತವಾದುವು.

- ಸಾಂಸ್ಕೃತಿಕ ಅಧ್ಯಯನಗಳ ವ್ಯಾಪ್ತಿ ಕೂಡ ವಿಸ್ತಾರವಾದಂತೆ ಪ್ರತಿಯೊಂದು ಸಂಗತಿಯ ಮುಂದೆ 'ಸಾಂಸ್ಕೃತಿಕ ಅಧ್ಯಯನ' ಎಂಬ ಹೆಸರಿಟ್ಟು ಸಂಶೋಧನೆಗಳು ನಡೆಯುತ್ತಿವೆ. ಪ್ರದೇಶ, ಜನಾಂಗ, ಸಾಹಿತ್ಯ ಕೃತಿಗಳು, ಸಾಹಿತಿಗಳು, ಭಾಷೆ, ಮೌಖಿಕ ಆಚರಣೆಗಳು, ಧಾರ್ಮಿಕ ಆಚರಣೆಗಳು ಹೀಗೆ ಸಾಂಸ್ಕೃತಿಕ ಅಧ್ಯಯನಗಳಿಗೆ ಮಿತಿ ಎಂಬುದು ಇಲ್ಲವಾಗಿದೆ.

- 'ಸಾಂಸ್ಕೃತಿಕ ಅಧ್ಯಯನ'ಗಳಲ್ಲಿ ಊಹನಾತ್ಮಕ ವಿಶ್ಲೇಷಣೆಯ ಅವಲಂಬಿಸಿರುತ್ತದೆ. ಜನರ ಜೀವನಕ್ರಮ, ನಂಬಿಕೆ, ಆಚರಣೆಗಳನ್ನು ಅಧ್ಯಯನ ಮಾಡುವಾಗ ವೈಯಕ್ತಿಕತೆಯ ಅಂಶ ಪ್ರಭಾವ ಬೀರುತ್ತದೆ. ಒಂದೇ ಸಂಗತಿ ಸಂಶೋಧಕರಿಗೆ ಭಿನ್ನವಾದ ಯೋಚನೆಗೆ ಕಾರಣವಾಗಬಹುದು ಅಥವಾ ತಾವು ನಂಬಿಕೊಂಡಿರುವ ಸೈದ್ಧಾಂತಿಕ ವಿಚಾರಧಾರೆ ಪ್ರಭಾವ ಬೀರಬಹುದು.

ಉದಾಹರಣೆಗೆ ಕೊಟ್ಟೂರೇಶ್ವರ ಜಾತ್ರೆಯ ಸಂದರ್ಭದಲ್ಲಿ(ಬಹುತೇಕ ಜಾತ್ರೆಗಳಲ್ಲಿ) ತೇರಿಗೆ ಎಸೆಯುವ ಬಾಳೆಹಣ್ಣನ್ನು ಅದು ನೆಲಕ್ಕೆ ಬೀಳುವ ಮೊದಲೇ ಹಿಡಿದು ತಿಂದರೆ ಒಳ್ಳೆಯದಾಗುತ್ತದೆ ಎಂಬ ನಂಬಿಕೆ ಜನರಲ್ಲಿದೆ. ಅರುಣ್ ಜೋಳದ ಕೂಡ್ಲಿಗೆಯವರು ಈ ಆಚರಣೆಯ ಹಿಂದೆ ಇರುವ ಸಾಂಸ್ಕೃತಿಕ ಸೂಕ್ಷ್ಮವನ್ನು ಗುರುತಿಸಿರುವರು. ಜಾತ್ರೆಯಲ್ಲಿ ವರ್ಣಭೇದವಿಲ್ಲದೇ ಎಲ್ಲರೂ ಸೇರಿರುತ್ತಾರೆ. ಒಬ್ಬ ತಳ ಸಮುದಾಯದ ವ್ಯಕ್ತಿ ಎಸೆದ ಬಾಳೆಹಣ್ಣನ್ನು ಉನ್ನತ ವರ್ಣದ ವ್ಯಕ್ತಿ ಪ್ರಸಾದವೆಂದು ಸ್ವೀಕರಿಸುತ್ತಾನೆ. ಈ ಆಚರಣೆಯ ಮುಖಾಂತರ ವರ್ಣಸಂಘರ್ಷದ ತೀವ್ರತೆಯನ್ನು ಕಡಿಮೆ ಮಾಡುವ ಉದ್ದೇಶವಿತ್ತೆಂದು ತೋರುತ್ತದೆ.

- ಇಂದು ಜಗತ್ತಿನಾದ್ಯಂತ ಮಾನವರಲ್ಲಿಯೇ ಕಂಡುಬರುವ ವರ್ಗಸಂಘರ್ಷ, ವರ್ಣಸಂಘರ್ಷ, ವರ್ಣಭೇದನೀತಿ, ತರ–ತಮಭಾವಗಳು, ಗುಲಾಮಿತನ, ಧರ್ಮ ಸಂಘರ್ಷ, ಭಾಷಾ ಸಂಘರ್ಷಗಳು, ಪ್ರಾಂತೀಯತೆ, ಜನಾಂಗವಾದ, ಸಾಮ್ರಾಜ್ಯವಾದ, ವಸಾಹತುಶಾಹಿ ಮನೋಸ್ಥಿತಿಗಳ ಹಿಂದಿನ ಪ್ರೇರಣೆ ಪ್ರಭಾವಗಳನ್ನು ಕಂಡುಕೊಳ್ಳಲು 'ಸಾಂಸ್ಕೃತಿಕ ಅಧ್ಯಯನ' ಗಳು ಮಹತ್ವವಾಗಿವೆ.

- ಮಾನವನನ್ನು ಇತರೆ ಜೀವರಾಶಿಗಳಿಂದ ಭಿನ್ನವಾಗಿಸಿಟ್ಟುರುವುದು ಸಂಸ್ಕೃತಿ ಎಂದು ಹೇಳುತ್ತೇವೆ. ಈ ಸಂಸ್ಕೃತಿಯನ್ನು ಇತರೆ ಜೀವರಾಶಿಗಳಲ್ಲಿ ಕಾಣಲಾರೆವು. ಆದ್ದರಿಂದಲೇ ಆ ಜೀವರಾಶಿಗಳು ನಿಸರ್ಗದಲ್ಲಿ ಸಹಜವೆಂಬಂತೆ ಬದುಕಿವೆ. ಆದರೆ ಮನುಷ್ಯನು ಅಸಹಜವಾಗಿ ಬದುಕಲು ಎರಡು ಅಂಶಗಳು ಮುಖ್ಯವಾಗಿವೆ. ಒಂದು ಸಂಸ್ಕೃತಿ. ಇನ್ನೊಂದು ನಾಗರಿಕತೆ. ಈ ಎರಡು ಬೆಳೆದು ಬಂದ ಬಗೆ ಮತ್ತು ಮಾಡಿದ ಪರಿಣಾಮಗಳನ್ನು ಅಧ್ಯಯನ ಮಾಡಲು 'ಸಾಂಸ್ಕೃತಿಕ ಅಧ್ಯಯನ'ಗಳು ಮುಖ್ಯವಾಗಿವೆ.

- ಖ್ಯಾತ ಭಾಷಾಶಾಸ್ತ್ರಜ್ಞ ನೋಮ್ ಚಾಮ್ಸ್ಕಿ, ಅಲೆಗ್ಸಾಂಡರ್ ಗ್ರಾಶಿಯೋ, ಫರ್ಡಿನೆಂಡ್ ಡಿ ಸಸೂರು ಮುಂತಾದ ಭಾಷಾಶಾಸ್ತ್ರಜ್ಞರು ಪ್ರತಿಪಾದಿಸಿದ ವಿಚಾರಧಾರೆಗಳು 'ಸಾಂಸ್ಕೃತಿಕ ಅಧ್ಯಯನ'ಗಳ ಮೇಲೆ ಹೊಸ ಪ್ರಭಾವ ಬೀರಿವೆ. ಅವರ ವಿಚಾರಧಾರೆಗಳು ಭಾಷಾಶಾಸ್ತ್ರಕ್ಕೆ ಸೀಮಿತವಾಗದೇ ವಿಶಾಲಾರ್ಥದಲ್ಲಿ ಸಂಸ್ಕೃತಿ ಕ್ಷೇತ್ರವನ್ನು ಒಳಗೊಂಡಿವೆ.

- ಮೇಲ್ನೋಟಕ್ಕೆ ಕಾಣುವ ಸಮಾಜವೊಂದರ ಸಂಸ್ಕೃತಿಯ ಆಳದಲ್ಲಿ ಹಲವು ವೈರುಧ್ಯಗಳು, ಪ್ರತಿರೋಧಗಳು, ಪ್ರತಿಕ್ರಿಯೆಗಳು, ಐತಿಹಾಸಿಕ ಘಟನೆಗಳು ಸೂಕ್ಷ್ಮವಾಗಿ ಸೇರಿರುತ್ತವೆ. 'ಸಾಂಸ್ಕೃತಿಕ ಅಧ್ಯಯನ'ದ ಮೂಲಕ ಆ ಸೂಕ್ಷ್ಮತೆಗಳನ್ನು ಗುರುತಿಸಬೇಕಾಗುತ್ತದೆ.

- ಒಂದು ನಿರ್ದಿಷ್ಟ ಪ್ರದೇಶದ ಸಾಂಸ್ಕೃತಿಕ ಅಧ್ಯಯನವು ಆ ಪ್ರದೇಶದ ಚರಿತ್ರೆ ಮತ್ತು ಪೌರಾಣಿಕ ಅಂಶಗಳನ್ನು ಒಳಗೊಂಡಿರುವುದು ಸರ್ವೇ ಸಾಮಾನ್ಯವಾಗಿದೆ. ಬಹಳ ದಿನಗಳವರೆಗೆ ಈ ಎರಡೇ ಅಂಶಗಳು ಸಾಂಸ್ಕೃತಿಕ ಅಧ್ಯಯನದಲ್ಲಿ ಪ್ರಮುಖ ಪಾತ್ರ ವಹಿಸಿದ್ದನ್ನು ನೋಡುತ್ತೇವೆ. ಆರಂಭದಲ್ಲಿ ಈ 'ಸಾಂಸ್ಕೃತಿಕ ಅಧ್ಯಯನ'ವೆಂಬ ಪರಿಕಲ್ಪನೆ ಸಹ ನಿಸ್ಸಂಶಯವಾಗಿ ವಸಾಹತುಶಾಹಿ ಚಿಂತನೆಯ ಫಲಶ್ರುತಿಯೇ ಆಗಿದೆ. ಮ್ಯಾಥ್ಯೋ ಅರ್ನಾಲ್ಡ್ ಮತ್ತಿತರರು ಸಂಸ್ಕೃತಿಯ ಅಧ್ಯಯನದ ಮೂಲಕ ಜಗತ್ತಿನಲ್ಲಿರುವ ಮಾನವ ಕಲ್ಯಾಣವನ್ನು ಸಾಧಿಸಲು, ಒಳ್ಳೆಯ ಮೌಲ್ಯಗಳನ್ನು ಪ್ರಸರಿಸಲು ಸಂಸ್ಕೃತಿಯನ್ನೇ ಆಯುಧವನ್ನಾಗಿ ಮಾಡಿಕೊಳ್ಳುವ ಚಿಂತನೆಯಲ್ಲಿದ್ದವರು. ಸಹಜವಾಗಿಯೇ ಸಂಸ್ಕೃತಿಯ ಅಧ್ಯಯನವೆಂದರೆ ವೀರ, ಬಲಿದಾನಗಳ ಕಥೆಯನ್ನು ಹೇಳುವುದು, ಸಹಜವಾಗಿಯೇ ಅದು ಭಾರತದ ಸಾಂಸ್ಕೃತಿಕ ಅಧ್ಯಯನಗಳ ಮೇಲೆ ಪ್ರಭಾವ ಬೀರಿದೆ. ಆದರೆ ಭಾರತದಂತಹ ಪೌರ್ವಾತ್ಯ ರಾಷ್ಟ್ರಗಳು ಚರಿತ್ರೆಯನ್ನು ಕಟ್ಟಿಕೊಡುವ ರೀತಿ ಪಾಶ್ಚಾತ್ಯರಿಗಿಂತ ಭಿನ್ನವಾದುದ್ದೇ ಆಗಿತ್ತು. ಪುರಾಣ ಇತಿಹಾಸದ ಜೊತೆ ಅಪಾರವಾದ ಮೌಖಿಕ ಪರಂಪರೆಯನ್ನು ಚರಿತ್ರೆಯ ರಚನೆಯಲ್ಲಿ ಬಳಸಿಕೊಳ್ಳುವಲ್ಲಿ ನಿರ್ಲಕ್ಷಿಸಿದವು. ಆದ್ದರಿಂದಲೇ ಪುರಾಣದೊಳಗೆ ಚಾರಿತ್ರಿಕ ಅಂಶಗಳು, ಚರಿತ್ರೆಯೊಳಗೆ ಪೌರಾಣಿಕ ಸಂಗತಿಗಳು ನುಸುಳಿಕೊಂಡುಬಿಡುವುದು ಸಾಮಾನ್ಯ ಸಂಗತಿ. ಆದ್ದರಿಂದಲೇ ಪಾಶ್ಚಾತ್ಯರು ಭಾರತೀಯರಿಗೆ ಐತಿಹಾಸಿಕ ಪ್ರಜ್ಞೆ ಇಲ್ಲವೆಂದು ಹೇಳುತ್ತಾ ಬಂದರು. ಹಾಗಾದರೆ ಭಾರತೀಯರಿಗೆ ಇತಿಹಾಸದ ಅರಿವೇ ಇರಲಿಲ್ಲವೇ ಎಂದರೆ ತಪ್ಪಾದೀತು. ಇತಿಹಾಸದ ವ್ಯಕ್ತಿ, ಸ್ಥಳ ಮತ್ತು ಘಟನೆಗಳನ್ನು ಹೇಗಾದರೂ ಮಾಡಿ ಪುರಾಣದೊಂದಿಗೆ ತಳುಕು ಹಾಕಿ ಕಥೆ ಹೇಳುವುದು ಭಾರತೀಯರ ಒಂದು ವಿಶಿಷ್ಟ ವಿಧಾನವಾಗಿದೆ. ಪಾಶ್ಚಾತ್ಯರು ಹೇಳುವ ವೈಜ್ಞಾನಿಕ ಇತಿಹಾಸದ ಮಾನದಂಡಗಳಿಗೆ ಇವು ನಿಲುಕುವುದಿಲ್ಲ. ಪಾಶ್ಚಾತ್ಯರ ದೃಷ್ಟಿಕೋನದ ಇತಿಹಾಸ ನಮಗೆ ತಿಳಿಸಿದ್ದು ಕಾಲುಬಾಗವಾದರೆ ತಿಳಿಸದೇ ಬಿಟ್ಟಿದ್ದು ಮುಕ್ಕಾಲು ಭಾಗವಾಗಿದೆ. ಈ ಮುಕ್ಕಾಲು ಭಾಗದ ಇತಿಹಾಸ ಶಾಸನ, ಸ್ಮಾರಕ, ದಸ್ತಾವೇಜುಗಳಲ್ಲಿ ಹುಡುಕಿದರೆ ಸಿಗಲಾರದು. ಅದನ್ನು ಜೀವಂತ ಮೌಖಿಕ ಪರಂಪರೆಯಲ್ಲಿ ಅಡಗಿ ಕುಳಿತ ಸಂಪ್ರದಾಯಗಳಲ್ಲಿ ಆಚಾರ ವಿಚಾರಗಳಲ್ಲಿ ಹುಡುಕಬೇಕಾದ ಅನಿವಾರ್ಯತೆ ಇದೆ. ಇದು ಸುಲಭದ ಮಾತಲ್ಲ.

ಯಾವ ವೈಜ್ಞಾನಿಕ ವಿಧಾನಗಳಿಂದಲೂ ಇದನ್ನು ಸಮರ್ಥಿಸಲು ಅಥವಾ ಗಣಿತದ ತಾರ್ಕಿಕತೆಯಂತೆ ನಿಖರವಾಗಿ ಹೇಳಲು ಸಾಧ್ಯವಾಗುವುದಿಲ್ಲ. ಆದರೆ ಜನ ಜೀವನ ವಿಧಾನದ ಒಳಗಿರುವ ಸಾಂಸ್ಕೃತಿಕ ಪ್ರತಿರೋಧಗಳನ್ನೋ, ಸಮನ್ವಯತೆಯನ್ನೋ, ಸಂಘರ್ಷಗಳನ್ನು ತಾರ್ಕಿಕವಾಗಿ ವಿಶ್ಲೇಷಿಸಬಹುದಷ್ಟೆ. ಈ ಲೇಖನದಲ್ಲಿ ಹರಿಹರ ತಾಲೂಕಿನ ಹರಿಯುವ ತುಂಗಭದ್ರಾ ನದಿಯನ್ನು ಹಿನ್ನೆಲೆಯಾಗಿಟ್ಟುಕೊಂಡು ನದಿಯ ಎರಡು ಬದಿಯ ಜನರ ಜೀವನ ಕ್ರಮಗಳ ತೌಲನಿಕ ಅಧ್ಯಯನವನ್ನು ಮಾಡುವ ಪ್ರಯತ್ನ ಮಾಡಿದ್ದೇನೆ. ಇತಿಹಾಸ ಮತ್ತು ಪುರಾಣಗಳನ್ನು ಪಕ್ಕಕ್ಕಿಟ್ಟು ಸಂಪ್ರದಾಯ ಮತ್ತು ಪರಂಪರೆಗಳನ್ನು ಕುರಿತು ವಿಶ್ಲೇಷಿಸಿದ್ದೇನೆ.

ಡಾ.ಎಚ್.ತಿಪ್ಪೇರುದ್ರಸ್ವಾಮಿಯವರ ಅಭಿಪ್ರಾಯ ದಂತೆ ನಾಗರಿಕತೆ ಮತ್ತು ಸಂಸ್ಕೃತಿ ಭಿನ್ನವಾದವುಗಳು. ನಾಗರಿಕತೆ ಭೌತಿಕವಾದುದ್ದಾದರೆ ಸಂಸ್ಕೃತಿ ಮಾನವನ ಆಂತರಿಕವಾದ ನಡವಳಿಕೆ ಆಚಾರ–ವಿಚಾರಗಳಿಗೆ ಸಂಬಂಧಿಸಿದ್ದಾಗಿದೆ. ನಾಗರಿಕತೆ ಮಾನವ ನಿರ್ಮಿತ ಭೌತಿಕ ರಚನೆಗಳನ್ನು ಅಥವಾ ವಿಜ್ಞಾನದ ಕೊಡುಗೆಗಳಿಗೆ ಸಂಬಂಧಿಸಿದ್ದರೆ ಸಂಸ್ಕೃತಿಯು ಸೈದ್ಧಾಂತಿಕತೆ ಮತ್ತು ತಾತ್ವಿಕತೆಗೆ ಸಂಬಂಧಿಸಿದೆ. ಇವೆರೆಡೂ ಪ್ರಭಾವಶಾಲಿಗಳಾಗಿವೆ. ಈ ಪ್ರಭಾವಗಳನ್ನು ಗುರುತಿಸಲು 'ಸಾಂಸ್ಕೃತಿಕ ಅಧ್ಯಯನ' ಅಗತ್ಯವಾಗಿದೆ.

**'ಸಾಂಸ್ಕೃತಿಕ ಅಧ್ಯಯನ'ಗಳ ಹೊಸ ಸಾಧ್ಯತೆಗಳು**

'ಸಾಂಸ್ಕೃತಿಕ ಅಧ್ಯಯನ'ವನ್ನು ಕೇವಲ ಇತಿಹಾಸದ ಸಂರಚನೆಯ ಮಟ್ಟಕ್ಕೆ ಇಳಿಸದೆ ಸಮಾಜಶಾಸ್ತ್ರ ಮತ್ತು ಮಾನವಶಾಸ್ತ್ರಗಳ ಅಗತ್ಯ ನೆರವು ಪಡೆದುಕೊಂಡು ಅಚಿತರ್ ಶಿಸ್ತೀಯ ಅಧ್ಯಯನ ಮಾಡುವುದು ಇಂದಿನ ಅಗತ್ಯವಾಗಿದೆ. ಮೌಖಿಕ ಪರಂಪರೆಯ ಹಲವು ಪಳೆಯುಳಿಕೆಗಳು ಇನ್ನೂ ಕೆಲವು ಜೀವಂತವಾಗಿದ್ದು ಸಾವಯವ ಸಮಾಜದ ಗತಕಾಲದ ಜೀವನದ ದರ್ಶನವನ್ನು ನೀಡುತ್ತವೆ. ಚರಿತ್ರೆಯು ಹೇಳದ ಅನೇಕ ನಿಗೂಢತೆಗಳನ್ನು 'ಸಾಂಸ್ಕೃತಿಕ ಅಧ್ಯಯನ'ಗಳು ಹೇಳುತ್ತವೆ. ಕೆಲವು ಅಧ್ಯಯನ ಮಾದರಿಗಳನ್ನು ಗಮನಿಸಬಹುದು.

1. **ನದಿಪಾತ್ರಗಳ ಇಕ್ಕೆಲಗಳಲ್ಲಿ ಬೆಳೆದು ಬಂದ ಸಂಪ್ರದಾಯಗಳು**

ನದಿಯೊಂದು ಮಾನವನ ಸಾಂಸ್ಕೃತಿಕ ಜೀವನದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ನಾಗರಿಕತೆಯ ವಿಕಾಸದಲ್ಲಿ ನದಿಗಳ ಪಾತ್ರವನ್ನು ಗುರುತಿಸಲಾಗಿದೆ. ಈಗ ನದಿಗಳ ಎರಡು ದಡಗಳಲ್ಲಿ ಬೆಳೆದು ಬಂದ ಕೆಲವು ವಿಶಿಷ್ಟ ಸಂಪ್ರದಾಯಗಳನ್ನು ಅಧ್ಯಯನ ಮಾಡುವ ಅಗತ್ಯತೆ ಇದೆ. ಉದಾ:

- **ತುಂಗಭದ್ರಾ ನದಿಯ ಇಕ್ಕೆಲಗಳಲ್ಲಿ ಬೆಳೆದು ಬಂದ ಸಂಪ್ರದಾಯಗಳು**: (ಹರಿಹರ ತಾಲೂಕಿಗೆ ಸಂಬಂಧಿಸಿದಂತೆ) ತುಂಗಭದ್ರಾ ನದಿಯು ಮಧ್ಯೆ ಕರ್ನಾಟಕದಲ್ಲಿ ಹರಿಯುತ್ತಿರುವ ಕರ್ನಾಟಕದ ಪ್ರಮುಖ ನದಿಯಾಗಿದೆ. ಈ ನದಿ ಪಾತ್ರಗಳಲ್ಲಿ ಕೆಲವು ಆಚರಣೆಗಳು ಚಾಲ್ತಿಯಲ್ಲಿವೆ. ಹರಿಹರ ತಾಲೂಕಿನ ಬಿಳಸನೂರು ಗ್ರಾಮದಲ್ಲಿರುವ ಚೌಡಮ್ಮ ಮತ್ತು ಹೊಳೆ ಆಚೆಯ ದಡದಲ್ಲಿರುವ ರಾಣೆಬೆನ್ನೂರು ತಾಲೂಕಿನಲ್ಲಿರುವ ನಾಗೇನಹಳ್ಳಿ ಗ್ರಾಮದ ಚೌಡಮ್ಮರಿಬ್ಬರೂ ಅಕ್ಕ ತಂಗಿಯರು ಎಂಬ ಅಭಿಪ್ರಾಯವಿದೆ. ಈ ಇಬ್ಬರೂ ಅಕ್ಕ ತಂಗಿಯರ ತವರುಮನೆ ಬಿಳಸನೂರಿನ ಗೌಡರ ಮನೆಯಾಗಿದೆ. ಈಗಲೂ ಹೊಳೆ ಆಚೆಯ ಗ್ರಾಮದವರು ತಮ್ಮೂರಿನ ಚೌಡಮ್ಮನವರ ಉತ್ಸವದಂದು ಬಿಳಸನೂರಿಗೆ ಬಂದು ಉಡಕ್ಕಿ(ಮಡಿಲಕ್ಕಿ) ತೆಗೆದುಕೊಂಡು ಹೋಗುತ್ತಾರೆ. ಇನ್ನೂ ವಿಶೇಷವೆಂದರೆ ಹೊಳೆ ಆಚೆಯ ಚೌಡಮ್ಮನವರಿಗೆ ನೈವೇದ್ಯ ಸಂಪೂರ್ಣವಾಗಿ ಸಸ್ಯಾಹಾರವಾಗಿದ್ದರೆ ಬಿಳಸನೂರು ಊರಿನಲ್ಲಿರುವ ಚೌಡಮ್ಮನಿಗೆ ಕೋಳಿ ಕುರಿ ಬಲಿದಾನ ನಡೆಯುತ್ತದೆ. ಒಂದೇ ತವರು ಮನೆಯ ದೈವಗಳು ಹೀಗೆ ಭಿನ್ನವಾದ ಪೂಜಾಪದ್ಧತಿಯನ್ನು ಹೊಂದಿವೆ. ಇದರ ಕುರಿತು ಅಧ್ಯಯನ ಅಗತ್ಯವಿದೆ.

- ತುಂಗಭದ್ರಾ ನದಿಯ ಉತ್ತರಕ್ಕಿರುವ ಜನರ ನಂಬಿಕೆಯಂತೆ ದಕ್ಷಿಣದವರು ಹೆಚ್ಚು ಆಧುನಿಕರು ಮತ್ತು ಅವರ ಭಾಷೆಯಲ್ಲಿ ಹೇಳುವುದಾದರೆ ಹೆಚ್ಚು ಜೋರು(ಫಾಸ್ಟ್) ಇರೋ ಜನ. ಹೊಳೆ ಆ ಕಡೆ ಹೆಣ್ಣು ಕೊಡೋಕೆ ಹಿಂದೇಟು ಹಾಕುತ್ತಾರೆ(ಒಂದೇ ಜಾತಿಯವರಾಗಿದ್ದರೂ ಕೂಡ). ದಕ್ಷಿಣದವರು ಹೊಳೆ ಆಚೆಯ ಜನರನ್ನು ಅವಿದ್ಯಾವಂತರೆಂದೇ ಬಗೆದಿದ್ದಾರೆ. ನದಿ ಪಾತ್ರಗಳ ಇಕ್ಕೆಲಗಳಲ್ಲಿರುವ ಜನರ ಈ ಭಿನ್ನ ಭಾವನೆಗೆ ಪ್ರಮುಖ ಕಾರಣವನ್ನು ಹೀಗೆ ಊಹಿಸಬಹುದು. ಮೈಸೂರು ರಾಜರ ದೂರದೃಷ್ಟಿಯ ಪರಿಣಾಮವಾಗಿ ಆಧುನಿಕತೆಯೆಂಬುದು ತುಂಗಭದ್ರಾ ನದಿಯ ದಕ್ಷಿಣಕ್ಕೆ ಬಹುಬೇಗ ಬಂದಿತು. ಆದರೆ ಉತ್ತರ ಕರ್ನಾಟಕ ಈ ವಿಷಯದಲ್ಲಿ ಸ್ವಲ್ಪ ಹಿಂದುಳಿಯಿತು. ದಕ್ಷಿಣ ಕರ್ನಾಟಕ ಜನರ ಈ ಪ್ರಗತಿಶೀಲತೆಯ ಬಗ್ಗೆ ಉತ್ತರದವರಿಗೆ ಒಂದು ರೀತಿಯ ಆತಂಕಕ್ಕೆ ಕಾರಣವಾಗಿರಬೇಕು.

## 2. ನಾಮ ವಿಜ್ಞಾನದ ಮೂಲಕ ಸಾಂಸ್ಕೃತಿಕ ಅಧ್ಯಯನ

- ನದಿ ಪಾತ್ರದ ಇಕ್ಕೆಲಗಳಲ್ಲಿ ಆಗಲಿ ಅಥವಾ ಇತರೆ ಯಾವುದೇ ನಿರ್ದಿಷ್ಟ ಭೂಪ್ರದೇಶದ ಅಧ್ಯಯನ ಕೈಗೊಳ್ಳುವಾಗ ಸ್ಥಳಗಳ ಹೆಸರುಗಳು ಸಾಂಸ್ಕೃತಿಕ ಅಧ್ಯಯನಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಖ್ಯಾತ ವಿದ್ವಾಂಸರಾದ ಶಂ.ಭಾ. ಜೋಶಿಯವರು ಈ ಬಗ್ಗೆ 'ಎಡೆಗಳು ಹೇಳುವ ಕಂನ್ನಾಡ ಕಥೆ' ಯಲ್ಲಿ ಸೋದಾಹರಣವಾಗಿ ವಿವರಿಸಿದ್ದಾರೆ. ಅವರು ಸ್ಥಳಗಳ ಹೆಸರುಗಳ ಬಗ್ಗೆ ತಮ್ಮ ಗಮನವನ್ನು ಕೇಂದ್ರೀಕರಿಸಿದ್ದಾರೆ. ನಂತರದ ಅಧ್ಯಯನಗಳಲ್ಲಿ ಈ ಬಗ್ಗೆ ಚರ್ಚೆಗಳು ಹೆಚ್ಚಾಗಿ ನಡೆದಿಲ್ಲವೆಂದು ತೋರುತ್ತದೆ. ಡಾ.ಎಂ.ಎಂ. ಕಲ್ಬುರ್ಗಿಯವರು 'ಅಡ್ಡ ಹೆಸರುಗಳು' ಎಂಬ ಲೇಖನದಲ್ಲಿ ಜನರ ಅಡ್ಡ ಹೆಸರುಗಳನ್ನು ಕುರಿತು ವಿಶ್ಲೇಷಿಸಿದ್ದಾರೆ. ಅವರ ದೃಷ್ಟಿಕೋನ ವ್ಯಕ್ತಿಯ ಅಡ್ಡ ಹೆಸರನ್ನು ಕುರಿತದ್ದಾಗಿದೆ. ಜನರ ಹೆಸರುಗಳನ್ನು ಕುರಿತು ಸಾಮಾಜಿಕ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲು ಸಾಧ್ಯವಿದೆ. ಉದಾ: ಅಶೋಕ ಎಂಬ ಹೆಸರಿನ ವಿಶಿಷ್ಟತೆಯನ್ನು ಗುರುತಿಸಬಹುದು. ಹರಿಹರ ತಾಲೂಕಿನ ಹಳ್ಳಿಗಳಲ್ಲಿ ಜಾತಿಭೇದವಿಲ್ಲದೇ ಸಾಮಾನ್ಯವಾಗಿ ಹೆಚ್ಚು ಪ್ರಚಲಿತವಾದ ಹೆಸರು ಇದಾಗಿದೆ. ಸಾಮಾನ್ಯವಾಗಿ ದೇವರ ಹೆಸರುಗಳನ್ನು ಇಡುವುದು ರೂಢಿಯಲ್ಲಿದೆ. ಒಂದು ಕ್ಷೇತ್ರದ ದೈವವನ್ನು ಹೆಸರನ್ನಿಕ್ಕಲು ಹೆಚ್ಚು ಬಳಸುತ್ತಾರೆ. ಬಸಪ್ಪ, ಕೊಟ್ರಪ್ಪ, ರುದ್ರಪ್ಪ ಎನ್ನುವ ಹೆಸರುಗಳನ್ನು ಗುರುತಿಸಬಹುದು. ಆದರೆ ಅಶೋಕ ಎನ್ನುವ ಹೆಸರು ಹರಿಹರ ತಾಲೂಕಿನಲ್ಲಿ ಹೆಚ್ಚು ಪ್ರಚಾರಕ್ಕೆ ಬರಲು ಕಾರಣವೇನಿರಬಹುದು ಎಂಬುದು ಅಧ್ಯಯನದ ವಿಷಯವಾಗುತ್ತದೆ. ಏಕೆಂದರೆ ಅಶೋಕ ಎನ್ನುವ ಹೆಸರು ಪುರಾಣದಲ್ಲಿ ಅಥವಾ ದೈವ ಸಂಬಂಧಿತ ಕಥೆಗಳಲ್ಲಿ ಕಂಡುಬರುವುದಿಲ್ಲ. ಇದು ಸಾಮ್ರಾಟ ಅಶೋಕನ ಪ್ರಭಾವವಿರಬಹುದೇ ಎಂಬುದು ಅಧ್ಯಯನದ ವಸ್ತುವಾಗುತ್ತದೆ.

## 3. ಸಾಮಾಜಿಕ ಸಂರಚನೆಯ ವಿನ್ಯಾಸ

- ಭಾರತೀಯ ಸಮಾಜದ ಸಂರಚನೆಯ ಪ್ರಮುಖ ಲಕ್ಷಣವನ್ನು ಗುರುತಿಸುವಾಗ ವರ್ಣಾಧಾರಿತ ಸಾಮಾಜಿಕ ರಚನೆಯನ್ನು ಗುರುತಿಸುತ್ತೇವೆ. ಈ ಸಂರಚನೆ ಇಡೀ ಭಾರತದಲ್ಲಿ ಒಂದೇ ರೀತಿಯಾಗಿತ್ತೇ ಎಂಬುದನ್ನು ಗಮನಿಸಿದರೆ ಇಲ್ಲವೆಂದೇ ಹೇಳಬೇಕಾಗುತ್ತದೆ. ಪ್ರತಿಯೊಂದು ಪ್ರದೇಶಕ್ಕೂ ಇದು ಭಿನ್ನವಾಗಿರುವುದನ್ನು ಕಾಣುತ್ತೇವೆ. 'ಅಸ್ಪೃಶ್ಯತೆ'ಯ ಆಚರಣೆಯ ಭಿನ್ನ ಭಿನ್ನ ಮಾದರಿಗಳನ್ನು ಭಿನ್ನ ಭಿನ್ನ ಪ್ರದೇಶಗಳಲ್ಲಿ ಗುರುತಿಸಲು ಸಾಧ್ಯವಿದೆ. ಇದನ್ನು ಮೌಖಿಕ ನಂಬಿಕೆಗಳಲ್ಲಿ ಗುರುತಿಸಬಹುದು. ಉದಾ: ತಳ ಸಮುದಾಯದ ವ್ಯಕ್ತಿಯೊಬ್ಬ ಮೇಲ್ವರ್ಗದ ಮನೆ ಒಳಗೆ ಹೋದರೆ ಆಗುವ ಪ್ರತಿಕ್ರಿಯೆಗಳು ಎಲ್ಲಾ ಕಡೆ ಒಂದೆಯಾಗಿಲ್ಲ. ಕೆಲವು ಕಡೆ ಸಂಪ್ರದಾಯಸ್ಥ ಮೇಲ್ವರ್ಗದ ಜನರಿಗೆ ಅದು ಮೈಲಿಗೆಯ ಆಗಿ ಕಂಡುಬಂದರೆ ಕೆಲವು ಕಡೆ ಇದಕ್ಕೆ ಭಿನ್ನವಾದ ನಂಬುಗೆಯಿದೆ. ಈ ರೀತಿ ಅಸ್ಪೃಶ್ಯನೊಬ್ಬ ಮನೆ ಒಳಗೆ

ಬಂದರೆ ಅದು ಲಕ್ಷ್ಮಿ ಬಂದಂತೆ ಎಂಬ ನಂಬುಗೆ ಇದೆ. ಮೇಲ್ವರ್ಗದ ಜಾತಿಗಳಲ್ಲಿಯೇ ಭಿನ್ನ ಭಿನ್ನವಾದ ಪ್ರತಿಕ್ರಿಯೆಗಳಿವೆ. ಇದಕ್ಕೆ ಕಾರಣಗಳನ್ನು ಅಧ್ಯಯನ ಮಾಡಬಹುದಾಗಿದೆ.

**4. ಧಾರ್ಮಿಕ ನಂಬುಗೆಗಳ ಬಗ್ಗೆ ಅಧ್ಯಯನ**

- ಧರ್ಮ ಮತ್ತು ದೇವರ ವಿಚಾರಗಳಲ್ಲಿರುವ ಭಿನ್ನ ನಂಬುಗೆಗಳನ್ನು ಕೂಡ ತುಲನಾತ್ಮಕವಾಗಿ ಅಧ್ಯಯನ ಮಾಡಲು ಸಾಧ್ಯವಿದೆ. ಹೆಣ್ಣು ಮತ್ತು ಗಂಡು ದೈವಗಳ ಕುರಿತು ತುಲನಾತ್ಮಕವಾಗಿ ಅಧ್ಯಯನ ಮಾಡಬಹುದು. ಸಾಮಾನ್ಯವಾಗಿ ಹೆಣ್ಣು ದೈವಗಳ ಉತ್ಸವಗಳು ಹುಣ್ಣಿಮೆಯಂದು ನಡೆದರೆ ಗಂಡು ದೈವಗಳ ಆಚರಣೆಗಳು ಅಮವಾಸ್ಯೆ ಹಿಂದೆ–ಮುಂದೆ ಇರುತ್ತವೆ. ಗಂಡು ದೈವಗಳು ಹೆಚ್ಚು ಗ್ರಾಂಥಿಕವಾದ ಆಚರಣೆಗಳನ್ನು ಹೊಂದಿದ್ದು ಹಬ್ಬಗಳ ರೂಪದಲ್ಲಿದ್ದರೆ ಹೆಣ್ಣು ದೈವಗಳ ಆಚರಣೆಗಳು ಜಾತ್ರೆಗಳ ರೂಪದಲ್ಲಿರುತ್ತವೆ ಮತ್ತು ಜಾನಪದೀಯವಾಗಿರುತ್ತವೆ. ಈ ಕುರಿತು ಅಧ್ಯಯನಕ್ಕೆ ಅವಕಾಶಗಳಿವೆ.

'ಸಾಂಸ್ಕೃತಿಕ ಅಧ್ಯಯನ'ದ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುವ ಅವಶ್ಯಕತೆ ಈಗ ಅನಿವಾರ್ಯವಾಗಿದೆ. ಹಳೆಯ ಮಾದರಿಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸದೇ ಹೊಸ 'ಸಾಂಸ್ಕೃತಿಕ ಅಧ್ಯಯನ'ದ ಮಾದರಿಗಳನ್ನು ರೂಢಿಸಿಕೊಂಡು ಅಧ್ಯಯನಕ್ಕೆ ತೊಡಗಬೇಕಾದ ಅವಶ್ಯಕತೆಯಿದೆ. ನಾನು ಚರ್ಚಿಸಿರುವುದು ಕೆಲವು ಮಾದರಿಗಳನ್ನು ಮಾತ್ರ. 'ಸಾಂಸ್ಕೃತಿಕ ಅಧ್ಯಯನ'ಗಳಿಗೆ ಯಾವುದೇ ಒಂದು ಸಿದ್ಧಾಂತ ಅನ್ವಯಿಸದೇ ಸಮಗ್ರ ಅಧ್ಯಯನಕ್ಕೆ ಪೂರಕವಾಗುವ ಅಂತರ್‌ಶಿಸ್ತೀಯ ಅಧ್ಯಯನದ ಮಾನದಂಡಗಳನ್ನು ಬಳಸಿಕೊಂಡು ವಿಶ್ಲೇಷಣಾತ್ಮಕವಾಗಿ ಅಧ್ಯಯನ ಮಾಡಬೇಕಾಗಿದೆ. ಪ್ರಾದೇಶಿಕ, ಜನಾಂಗೀಯ, ಭಾಷಿಕ ಅಧ್ಯಯನಗಳ ಜೊತೆ ಜಾನಪದೀಯ ಅಧ್ಯಯನಗಳನ್ನು ಸೇರಿಸಿಕೊಂಡು ಅಧ್ಯಯನ ಮಾದರಿಯನ್ನು ನಿರ್ಮಿಸಿಕೊಳ್ಳುವುದು ಇಂದಿನ ಅಗತ್ಯತೆಯಾಗಿದೆ. ಈಗಾಗಲೇ ನಡೆದಿರುವ ಅಧ್ಯಯನ ಮಾದರಿಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ಹೊಸದಾಗಿ ಮಾದರಿಗಳನ್ನು ಗುರುತಿಸಿಕೊಳ್ಳಬೇಕಾಗಿದೆ. ನನ್ನ ಪ್ರಯತ್ನ ಈ ದಿಸೆಯಲ್ಲಿ ಸಾಗಿದೆ.

**ಪರಾಮರ್ಶನ ಗ್ರಂಥಗಳು**


- ಚಿದಾನಂದಮೂರ್ತಿ ಎಂ. (1979). *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.* ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.
- *ಹರಿಹರ ತಾಲ್ಲೂಕಿನ ಗೆಜೆಟಿಯರ್.* (2018). ಕರ್ನಾಟಕ ಗ್ಯಾಸೆಟಿಯರ್ ಇಲಾಖೆ.
- ಜೋಶಿ. ಶಂ.ಭಾ. (1947). *ಎಡೆಗಳು ಹೇಳುವ ಕಂನ್ನಾಡ ಕಥೆ.* ಮಾಧವ ಬಲ್ಲಾಳ ಬಂಧುಗಳು.
- ಕಲ್ಬುರ್ಗಿ, ಎಂ.ಎಂ. (2008). ಅಡ್ಡ ಹೆಸರು. ***ಈ ಗ್ರಂಥದಲ್ಲಿ,*** ಲಿಂಗಯ್ಯ ಡಿ., ಚಕ್ಕೆರೆ ಶಿವಶಂಕರ್. (ಸಂ.). *ಸ್ಥಳನಾಮಗಳ ಅಧ್ಯಯನ.* ಕರ್ನಾಟಕ ಜಾನಪದ ಪರಿಷತ್ತು.
- ತಿಪ್ಪೇರುದ್ರಸ್ವಾಮಿ ಎಚ್. (2015). *ಕರ್ನಾಟಕ ಸಂಸ್ಕೃತಿ ಸಮೀಕ್ಷೆ.* ಡಿ.ವಿ.ಕೆ.ಮೂರ್ತಿ.
- ರಹಮತ್ ತರಿಕೆರೆ. (2017). *ಸಾಂಸ್ಕೃತಿಕ ಅಧ್ಯಯನ.* ಅಭಿನವ ಪ್ರಕಾಶನ